# ಗೆಲುವು ಹುಡುಕುತ್ತ ಕಾಲೇಜು ಮೆಟ್ಟಿಲಲ್ಲಿ...

‘ಕಾಲೇಜೇ ಜೈಲು, ಪ್ರಿನ್ಸಿಪಲ್ಲು ಪುಕ್ಲು, ಹೈಕ್ಳು ತಿಕ್ಲು’– ಇದು ‘ವಾಸ್ಕೋಡಿಗಾಮ’ ಸಿನಿಮಾದ ಒಂದು ಗೀತೆ. ಕಾಲೇಜು ಜೀವನದ ಅಣಕದಂತಿರುವ ಈ ಗೀತೆಯನ್ನು ಈಗಾಗಲೇ ಕಾಲೇಜು ಹೈಕಳು ಗುನುಗುತ್ತಿದ್ದಾರೆ. ಒಂದು ಕಡೆ ಕಾಲೇಜು ಜೀವನವನ್ನು ತಮಾಷೆ ಮಾಡುತ್ತ, ಇನ್ನೊಂದು ಕಡೆ ತಮ್ಮ ಸಿನಿಮಾದ ಪ್ರಚಾರಕ್ಕೆ ಕಾಲೇಜುಗಳನ್ನೇ ಕೇಂದ್ರ ಆಗಿಸಿಕೊಳ್ಳುವ ಮೂಲಕ ‘ವಾಸ್ಕೋಡಿಗಾಮ’ ತಂಡ ಸಿಕ್ಕಾಪಟ್ಟೆ ಸುದ್ದಿ ಮಾಡುತ್ತಿದೆ.

‘ಸೈಬರ್ ಯುಗದೊಳ್ ನವಯುವ ಮಧುರ ಪ್ರೇಮ ಕಾವ್ಯ’ ಚಿತ್ರವನ್ನು ನಿರ್ದೇಶಿಸಿದ್ದ ಮಧುಚಂದ್ರ ‘ವಾಸ್ಕೋಡಿಗಾಮ’ದ ನಿರ್ದೇಶಕರು. ವಾಸು ಡಿ ಗಾಮನಹಳ್ಳಿ ಎನ್ನುವ ತರುಣನೊಬ್ಬ ‘ವಾಸ್ಕೋಡಿಗಾಮ’ ಆಗುವ ಕಥೆ ಚಿತ್ರದ್ದು. ಈ ಚಿತ್ರದ ಮೂಲಕ– ‘ಪುಸ್ತಕದ ಹುಳು ಆಗಬೇಡಿ. ಪಠ್ಯದಾಚೆಗಿನ ಜಗತ್ತನ್ನು ಕಣ್ತೆರೆದು ನೋಡಿ, ಅನುಭವಿಸಿ’ ಎನ್ನುವ ಸಂದೇಶವನ್ನು ಕಾಲೇಜು ತರುಣ ತರುಣಿಯರಿಗೆ ನಿರ್ದೇಶಕರು ನೀಡುತ್ತಿದ್ದಾರೆ. ಮನರಂಜನೆಯ ಜೊತೆಗೆ ಶಿಕ್ಷಣ ವ್ಯವಸ್ಥೆಯ ಬಗ್ಗೆ ಸೂಕ್ಷ್ಮ ಟೀಕೆ ಟಿಪ್ಪಣಿಯೂ ಚಿತ್ರದಲ್ಲಿ ಇರುವ ಸುಳಿವನ್ನು ಚಿತ್ರತಂಡ ಬಿಟ್ಟುಕೊಟ್ಟಿದೆ.

ಸುಮಾರು ಇನ್ನೂರು ಕಾಲೇಜುಗಳಲ್ಲಿ ಚಿತ್ರದ ಟ್ರೇಲರ್ ಬಿಡುಗಡೆ ಮಾಡುವ ಮೂಲಕ ಮಧುಚಂದ್ರ ವಿಭಿನ್ನ ಪ್ರಚಾರತಂತ್ರ ಅನುಸರಿಸಿದ್ದಾರೆ. ವಿದ್ಯಾರ್ಥಿಗಳಿಂದ ವ್ಯಕ್ತವಾಗಿರುವ ಬೆಚ್ಚಗಿನ ಪ್ರತಿಕ್ರಿಯೆ ಅವರ ನಿರೀಕ್ಷೆಗಳನ್ನು ಹೆಚ್ಚಿಸಿದೆ. ಕಿಶೋರ್ ಹಾಗೂ ಪಾರ್ವತಿ ನಾಯರ್ ‘ವಾಸ್ಕೋಡಿಗಾಮ’ದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಕಿಶೋರ್ ಅವರದು ಮೇಷ್ಟ್ರ ಪಾತ್ರ. ತೆರೆಯ ಹಿಂದಿನ ಪಾತ್ರಗಳಲ್ಲಿ ಸಂಗೀತ ನಿರ್ದೇಶಕ ಪೂರ್ಣಚಂದ್ರ ತೇಜಸ್ವಿ ಅವರು ಹೆಚ್ಚು ಗಮನಸೆಳೆಯುತ್ತಿರುವುದು ವಿಶೇಷ.




## ಮಗನ ಡ್ರೆಸ್ಸು, ಅಪ್ಪನ ಕಾಸು!

‘ಸಾಯಿಸಬೇಕು ಇಲ್ಲವೇ ಸಾಯಬೇಕು’. ಇದು ನಿರ್ದೇಶಕನಾಗಿಯೇ ತೀರುವ ಹಟದಲ್ಲಿರುವ ಶಿವು ಅವರ ಮನಸ್ಸಿನಲ್ಲಿದ್ದ ನಿರ್ಧಾರ. ಸಾಯಿಸುವುದು ಯಾರನ್ನು ಎನ್ನುವ ಪ್ರಶ್ನೆಯನ್ನು ಯಾರೂ ಕೇಳಬಾರದು. ‘ಮಾಡು ಇಲ್ಲವೇ ಮಡಿ’ ಎನ್ನುವುದನ್ನು ಶಿವು ಕೊಂಚ ಪೆಡುಸಾಗಿ ಹೀಗೆ ಆಡಿರಬಹುದೆಂದು ಸಮಾಧಾನ ಮಾಡಿಕೊಳ್ಳಬೇಕು. ‘ಡಬ್ಬಿಂಗ್ ಬೇಕು’ ಎನ್ನುವ ಕೂಗು ಗಟ್ಟಿಯಾಗಿ ಕೇಳಿಬರುತ್ತಿರುವ ಸಂದರ್ಭದಲ್ಲಿ ಇಂಥ ಅಪಸವ್ಯಗಳನ್ನು ಸಹಿಸಿಕೊಳ್ಳುವುದು ಅನಿವಾರ್ಯ.

ಶಿವು ನಿರ್ದೇಶನದ ಚೊಚ್ಚಲ ಸಿನಿಮಾದ ಹೆಸರು ‘ಡ್ರೆಸ್ ಕೋಡ್’. ಶಾಲಾ ಕಾಲೇಜುಗಳಲ್ಲಿನ ವಸ್ತ್ರಸಂಹಿತೆ ವಿವಾದಗಳನ್ನು ಸಿನಿಮಾದ ಶೀರ್ಷಿಕೆ ನೆನಪಿಸುವಂತಿದೆ. ಅಷ್ಟು ಮಾತ್ರವಲ್ಲ, ಕಥೆಯಲ್ಲೂ ಈ ನೀತಿಸಂಹಿತೆ ಇರುವಂತಿದೆ. ಬಟ್ಟೆ ಯಾವ ರೀತಿ ಇರುತ್ತದೆ ಎನ್ನುವ ಕಾರಣದಿಂದಾಗಿ ಹೆಣ್ಣಿನ ಮಾನ ಅಥವಾ ಅವಮಾನ ನಿರ್ಧಾರವಾಗುತ್ತದೆ ಎನ್ನುವ ತರ್ಕವನ್ನು ಸಿನಿಮಾದ ಮಟ್ಟಿಗೆ ಚಿತ್ರತಂಡವೂ ನೆಚ್ಚಿದಂತಿದೆ. ಕಳೆದ ವಾರ ಸುದ್ದಿಗೋಷ್ಠಿ ನಡೆಸಿದ ‘ಡ್ರೆಸ್ ಕೋಡ್’ ತಂಡ ತಮ್ಮ ಚಿತ್ರದ ಬಗ್ಗೆ ಅಪಾರ ಆತ್ಮವಿಶ್ವಾದಲ್ಲಿತ್ತು. ಕಥೆಯ ಬಗ್ಗೆ ಹೆಚ್ಚು ಮಾತನಾಡದ ಚಿತ್ರತಂಡ, ತನ್ನನ್ನು ಪರಿಚಯಿಸಿಕೊಳ್ಳುವ ಉತ್ಸಾಹದಲ್ಲಿತ್ತು.

ಪೃಥ್ವಿ ‘ಡ್ರೆಸ್ ಕೋಡ್’ ನಾಯಕ. ಮಗನ ಹೀರೊ ಆಗುವ ಕನಸಿಗೆ ಅಪ್ಪ ದಯಾನಂದ್ ಬಂಡವಾಳ ಹೂಡಿದ್ದಾರೆ. ಈ ಚಿತ್ರಕ್ಕಾಗಿ ಮಗನಿಗೆ ತರಬೇತಿಯನ್ನೂ ಕೊಡಿಸಿದ್ದಾರಂತೆ. ಹೇಮಾ, ಶಿವಬಾಲಾಜಿ, ದಿವ್ಯ ಹಾಗೂ ಆಶಾ ತಾರಾಗಣದಲ್ಲಿರುವ ಪ್ರಮುಖರು.



■ ರಘು